**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 77/2016</u>**
**<u>C/W</u>**
**<u>ಎಸ್.ಸಿ. ಸಂಖ್ಯೆ: 84/2017</u>**
**<u>ಎಸ್.ಸಿ. ಸಂಖ್ಯೆ: 90/2018</u>**
**<u>ಎಸ್.ಸಿ. ಸಂಖ್ಯೆ: 20/2019</u>**
**<u>ಎಸ್.ಸಿ. ಸಂಖ್ಯೆ: 51/2019</u>**

ದಿನಾಂಕ: 04.01.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 11 ಪ್ರಾಸಾ - 8

| | | |
|---|---|---|
| ಹೆಸರು | : | ಶ್ರೀಧರ್ |
| ತಂದೆಯ/ಗಂಡನ ಹೆಸರು | : | ಕೋಟಪ್ಪ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಕಂಟ್ರ್ಯಾಕ್ಟರ್ |
| ವಾಸಸ್ಥಳ | : | ಚಕ್ರಬಾವಿ, ಮಾಗಡಿ |

**<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>**

ನಾನು ಶವ ನೋಡಿರುತ್ತೇನೆ ಎಂದು ನುಡಿದು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ.

2. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>

3. ದಿನಾಂಕ 16.05.2016 ರಂದು ಮಧ್ಯಾಹ್ನ ಸುಮಾರು 12 ಗಂಟೆ ಸಮಯದಲ್ಲಿ ನಾನು ಬೆಂಗಳೂರಿಗೆ ಹೋಗುವಾಗ, ಮಾಗಡಿಯಿಂದ ಬೆಂಗಳೂರು ಕಡೆಯ ಸ್ವಲ್ಪ ದೂರದಲ್ಲಿ, ಹೊನ್ನಾಪುರ ಕೆರೆಯಿಂದ ಸ್ವಲ್ಪ ಹಿಂದೆ ಜನರು ಗುಂಪು ಕಟ್ಟಿಕೊಂಡು ನಿಂತಿದ್ದನ್ನು ನೋಡಲಾಗಿ, ಬೆಂಗಳೂರು-ಮಾಗಡಿ ರಸ್ತೆ ದಕ್ಷಿಣಕ್ಕೆ ಕಲ್ಲುಬಂಡೆಗಳ ಮಧ್ಯದಲ್ಲಿ ಯಾವುದೋ ಒಂದು ಅಪರಿಚಿತ ಸುಮಾರು 25-30 ವರ್ಷ ವಯಸ್ಸಿನ ಗಂಡಸಿನ ಶವ ಉತ್ತರಕ್ಕೆ ತಲೆಯಾಗಿ, ದಕ್ಷಿಣಕ್ಕೆ ಕಾಲುಗಳಾಗಿ ಅಂಗಾತವಾಗಿ ಬಿದ್ದಿದ್ದನ್ನು, ಸದರಿ ಶವವು ...................................... ಯಾವುದೋ ಅರಿತವಾದ ಆಯುಧಗಳಿಂದ ಹೊಡೆದು ಕೊಲೆ ಮಾಡಿ ಸಾಕ್ಷ್ಯಾಧಾರಗಳನ್ನು ನಾಶಪಡಿಸಲು ಮಾಗಡಿ ಟೌನ್ ತಿರುಮಲೆ ಗ್ರಾಮಕ್ಕೆ ಸೇರಿದ ಸರ್ಕಾರಿ ಗೋಮಾಳ ಹೊಸಪೇಟೆ ವಾಸಿ ಕೆಂಪಯ್ಯ ರವರು ಅನುಭೋಗದಲ್ಲಿರುವ ಕಲ್ಲುಬಂಡೆಗಳ ಮಧ್ಯೆ ಮಣ್ಣಿನ ಜಾಗದಲ್ಲಿ ಹಾಕಿರುವುದು ಕಂಡುಬರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಶವವನ್ನು ಈಗಾಗಲೇ ಗುರುತಿಸಿರುವ ನಿಶಾನೆ ಪಿ 6 ಶವಪಂಚನಾಮೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯನ್ನು ನಿಶಾನೆ ಪಿ 6(ಸಿ) ಎಂದು ಗುರುತು ಮಾಡಲಾಯಿತು.

4. ನಿಶಾನೆ ಪಿ 6(ಸಿ) ರಲ್ಲಿರುವ ಅಂಶಗಳು ಗೊತ್ತಿರದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.